ನಾನು ನಿಂತ ಜಾಗ, ಆಡಿದ ಮಾತು, ಹಿಂಬಾಲಿಸಿದ ಹಾದಿ, ಕೊಟ್ಟ ಹೂವು... ಇವುಗಳಲ್ಲಿ ಯಾವೊಂದಾದರೂ ನನ್ನ ನೆನಪು ತರದೇ ಹೋಗುತ್ತವೆಯಾ?

ಅವಳ ನೆನಪುಗಳು ಕಿಟಕಿ ಮುಚ್ಚಿದರೂ ಅಗೋಚರ ರಂಧ್ರವೊಂದರಿಂದ ನುಸುಳಿ ಬರುವ ಚಳಿಗಾಳಿಯಂತೆ ನುಗ್ಗಿಬರತೊಡಗಿದವು. ಎಲ್ಲಿರಬಹುದು ಅವಳು? ಎಂದೂ ಮುಗಿಯದ ಈ ದಿವ್ಯ ಕನವರಿಕೆಯನ್ನು ನನ್ನ ಪಾಲಿಗೆ ಕೊಟ್ಟು ಅದ್ಯಾರ ಹೆಗಲಿಗೊರಗಿ ನಿದ್ರಿಸುತ್ತಿರಬಹುದು?

ಹೀಗೆ ನಾನು ಈ ಲೋಕದ್ದೇ ಅಲ್ಲವೆಂಬಂತಹಾ ಯೋಚನೆಗಳಲ್ಲಿ ಕಳೆದುಹೋಗಿದ್ದಾಗಲೇ ಹೆಗಲಿಗೊರಗಿದ್ದ ವೈಷ್ಣವಿಯಲ್ಲೇನೋ ತಳಮಳ ಸಂಭವಿಸತೊಡಗಿತು. ನಾನು ನೋಡುತ್ತಿರುವಂತೆಯೇ ಬೆಚ್ಚಿದಂತೆ ಕಣ್ತೆರೆದು ಒಂದು ಕೈಯನ್ನು ಬಾಯಿಗಡ್ಡವಿಟ್ಟುಕೊಂಡು, ಇನ್ನೊಂದರಿಂದ ಮುಚ್ಚಿದ ಕಿಟಕಿಯ ಗಾಜನ್ನು ಎಳೆಯತೊಡಗಿದಳು. ತಕ್ಷಣ ಪರಿಸ್ಥಿತಿಯ ಅರಿವಾದ ನಾನು ಕಿಟಕಿಯನ್ನು ಹಿಂದಕ್ಕೆಳೆದು ಅವಳಿಗೆ ತಲೆ ಹೊರಗೆ ಹಾಕಲು ಅನುವುಮಾಡಿಕೊಟ್ಟೆ. ಮುಂದಿನ ಹಲವು ನಿಮಿಷಗಳ ಕಾಲ ಬಿಟ್ಟೂ ಬಿಟ್ಟೂ ಕರುಳೇ ಆಚೆ ಬಂದಂತೆ ಹೊಟ್ಟೆಯಲ್ಲಿರುವುದನ್ನೆಲ್ಲಾ ಕಾರಿಕೊಂಡು ಸೀಟಿಗೊರಗಿದವಳನ್ನು ನೋಡಿ ಕಳವಳವಾಯಿತು. ಪಾಪ, ಯಾವಾಗಲೂ ಸ್ಲೀಪರ್ ಟ್ರೈನಿನಲ್ಲೋ, ರಾಜಹಂಸದಲ್ಲೋ ಓಡಾಡುತ್ತಿದ್ದವಳು. ಈ ಬಾರಿ ನಾನೇ ಒತ್ತಾಯ ಮಾಡಿ ನೆಟ್ಟಗಿನ ಸೀಟುಗಳ ಒರಟು ಪ್ರಯಾಣದ ಕರ್ನಾಟಕ ಸಾರಿಗೆ ಬಸ್ಸು ಹತ್ತಿಸಿದ್ದೆ.

''ಪ್ರಯಾಣ ಮಾಡುವಾಗ ವಾಂತಿಯಾಗುತ್ತೆ ಅಂತ ಮೊದಲೇ ಹೇಳೋದಲ್ವೇನೇ ಹುಡುಗೀ... ಸ್ಲೀಪರ್ರೋ, ಸೆಮಿ ಸ್ಲೀಪರ್ರೋ ಬುಕ್ ಮಾಡ್ತಿದ್ದೆ...'' ಪಶ್ಚಾತ್ತಾಪದಿಂದ ಕೇಳಿದೆ.

''ವಾಂತಿಯಾಗುವುದಕ್ಕೆ ಪ್ರಯಾಣದ ಕುಲುಕಾಟವೇ ಕಾರಣವಾಗಬೇಕಿಲ್ಲ ಕಣೋ" ಬಳಲಿಕೆಯ ಮಧ್ಯೆಯೂ ಕ್ಷೀಣವಾಗಿ ನಕ್ಕು ಮುಂದುವರಿಸಿದಳು.

''ನಡೆಯುವಾಗಲೂ ಆಗುತ್ತದೆ, ಕುಳಿತಿರುವಾಗಲೂ ಆಗುತ್ತದೆ... ಅಷ್ಟೇ ಏಕೆ, ಸುಮ್ಮನೆ ನಿದ್ರಿಸುವಾಗಲೂ ಯಾವುದೋ ಕೆಟ್ಟಕನಸಿನಾಳದಿಂದ ಎದ್ದುಬಂದು, ನನ್ನನ್ನೂ ಎಬ್ಬಿಸಿ ವಿಷಕಾರಿಕೊಳ್ಳುತ್ತದೆ... ನನಗೆ ಗರ್ಭಕೋಶದ ತೊಂದರೆಯಿದೆ"

"ಗರ್ಭಕೋಶಾನಾ?" ಹೆಚ್ಚೂಕಮ್ಮಿ ಕಿರುಚಿದಂತೆಯೇ ಕೇಳಿದ ನನಗೆ ನಿಜಕ್ಕೂ ಆಘಾತವಾಗಿತ್ತು.

"ಏನು ಹೇಳ್ತಿದೀಯ ವೈಶು? ಏನಾಗಿದೆ ನಿನಗೆ? ಅದೇನದು ಗರ್ಭಕೋಶದ ಕಾಯಿಲೆ? ಯಾಕೆ ಬಂತು ಅದು? ಡಾಕ್ಟರಿಗೆ ತೋರ್ಸಿದೀಯಾ? ನನಗ್ಯಾಕೆ ಹೇಳಲಿಲ್ಲ ಈ ವಿಷಯಾನ?" ಮನದಲ್ಲಿ ಸಾಲುಸಾಲಾಗಿ ಮೂಡಿದ ಆತಂಕದ ಪ್ರಶ್ನೆಗಳನ್ನೆಲ್ಲ ಹಾಗ್ಹಾಗೇ ಕೇಳಿದೆ.

''ಯಾಕೆ ಬಂತು ಅಂದರೆ ಏನು ಹೇಳಲಿ ಹೇಳು? ಮೊದಮೊದಲು ತಿಂಗಳಿಗೆ ಹೊರಗಾಗುವುದು ವ್ಯತ್ಯಾಸವಾಯಿತು. ಬರುಬರುತ್ತಾ ಅದು ತಾರಾಮಾರಿ ಹೊಟ್ಟೆನೋವಿಗೆ ಹಾಗೂ ವಾಂತಿಗೆ ತಿರುಗಿತು. ಪರಿಚಯದವರೇ ಆದ ಡಾಕ್ಟರೊಬ್ಬರಿಗೆ ತೋರಿಸ್ತಿದೇನೆ. ವಾಸಿಯಾಗುತ್ತೆ ಅಂದಿದಾರೆ. ಆಗುವ ತನಕ ಇದೆಲ್ಲ ಇದ್ದದ್ದೇ."

''ಅಮ್ಮನಿಗೆ ಹೇಳಿದೀಯಾ?"

"ಹೇಳಿ ಏನು ಪ್ರಯೋಜನ ಹೇಳು? ಪಾಪ, ಅವಳ ಕಾಯಿಲೆಗಳೇ ಅವಳಿಗಾಗಿದೆ. ಜೊತೆಗೆ ನನ್ನದನ್ನೂ ಸೇರಿಸಿ ಅವಳ ರಾತ್ರೆಗಳ ನಿದ್ರೆಯನ್ನ ಕೆಡಿಸಲಾ? ಅಷ್ಟಕ್ಕೂ ಅವಳಿಗೇನಾದರೂ ಹೇಳಿದರೆ ಸುಮ್ಮನೆ ಗಾಬರಿಯಾಗ್ತಾಳೆ. ಕೆಲಸಬಿಡು, ಊರಿಗೆ ಬಾ, ಈ ಡಾಕ್ಟರಿಗೆ ತೋರಿಸು, ಆ ದೇವಸ್ಥಾನಕ್ಕೆ ಹೋಗು, ಈ ಬೆಟ್ಟ ಹತ್ತು, ಮದುವೆಯಾಗು ಅಂತೆಲ್ಲ ಗಡಿಬಿಡಿ ಮಾಡ್ತಾಳೆ. ಹೆಣ್ಮಕ್ಕಳ ಬಾಳಿನ ಸಕಲ ಸಮಸ್ಯೆಗಳಿಗೂ ಮದುವೆಯೇ ಮದ್ದು ಎಂಬುದು ಅವಳ ನಂಬಿಕೆ. ಅದಕ್ಕೇ ಅವಳಿಗೇನೂ ಹೇಳದೇ ಇದು ವಾಸಿಯಾಗುವ ತನಕ ಏನಾದರೊಂದು ನೆಪ ಹೇಳಿ ಮದುವೆಯನ್ನು ಮುಂದೂಡುತ್ತಿದ್ದೇನೆ."